**ದಿವಾಣಿ ಹಾಗೂ ಪ್ರ.ದ.ನ್ಯಾ. ದಂ.ಗಳ  ನ್ಯಾಯಾಲಯ ಕುಂದಗೋಳ**

**ಓ ಎಸ್ ನಂಃ 87/2023**

**ಪಿಡಬ್ಲ್ಯೂ/1**

**ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋದಿಸಲಾಯಿತುಃ ದಿಃ  29.02.2024.**

**ಮುಂ.ಮುಖ್ಯ ವಿಚಾರಣೆಃ ಶ್ರೀ ಎಮ್ ಬಿ ಬಿ ವಕೀಲರಿಂದ ವಾದಿ ವಕೀಲರುಃ**

ನನ್ನ ಸಾಕ್ಷಿ ಮುಖ್ಯ ವಿಚಾರಣೆಯನ್ನು ಈ ಹಿಂದೆ ಲಿಖಿತ ಪ್ರಮಾಣ ಪತ್ರದಲ್ಲ ಸಲ್ಲಿಸಿದ್ದು, ಅದರ ಮುಂದುವರೆದ ಭಾಗವಾಗಿ ದಾಖಲೆಯನ್ನು ಹಾಜರು ಪಡಿಸಿದ್ದು,  ಏಂಟು ಪೋಟೋಗಳನ್ನು ನಿಪಿಃ2 ರಿಂದ 9 ಎಂದು,   ಪೆಂಡ್ರಾವ್ ನಿಪಿಃ10 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಶ್ರೀ ಆರ್ ಎಸ್ ವಕೀಲರಿಂದ ಪ್ರತಿವಾದಿ ಪರ ವಕೀಲರುಃ**

ನಾನು ದಾವಾ ಜಮೀನಿನಲ್ಲಿ ಸುಮಾರು 40 ವರ್ಷಗಳಿಂದ ವ್ಯವಸಾಯ ಮಾಡುತಿದ್ದೇನೆ ಎಂದರೆ ಸಾಕ್ಷಿ ಇಲ್ಲ, ಬೇರೆಯವರು ಮಾಡುತಿದ್ದರು, ನಾನು ಸದರಿ ಜಮೀನನ್ನು ಜುಲೈ ಮಾಹೆ

2010 ರಲ್ಲಿ ಖರೀದಿ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ಪ್ರತಿವಾದಿ ಕಂಪನಿ ಇವರು ದಾವಾ ಜಮೀನಿನಲ್ಲಿ ವಿದ್ಯುತ್ ಕಂಬಗಳನ್ನು 2012 ರಲ್ಲಿ ಹಾಕಿಸಿರುತ್ತಾರೆ ಎಂದರೆ ಸಾಕ್ಷಿ ಹಾಕಿರಬಹುದು ನಾನು ಬೆಂಗಳೂರಿನಲ್ಲಿ ವಾಸವಿದ್ದ ಕಾರಣ ನನಗೆ ಅದು ಗೊತ್ತಾಗಿಲ್ಲ ಅಂತ ನುಡಿಯುತ್ತಾರೆ. ನೀವು ನಿಮ್ಮ ಜಮೀನಿನಲ್ಲಿ ಯಾವಾಗಿನಿಂದ ವ್ಯವಸಾಯ ಕೆಲಸ ಮಾಡಿಸುತಿದ್ದೀರಿ ಎಂದರೆ ಸಾಕ್ಷಿ ನಾನು ಬೆಂಗಳೂರಿನಲ್ಲಿ ಇದ್ದು, ಬೇರೆಯವರಿಂದ ವ್ಯವಸಾಯ ಮಾಡಿಸುತಿದ್ದೆ ಎಂದು ನುಡಿಯುತ್ತಾರೆ. ನಿಮ್ಮ ಜಮೀನಿನಲ್ಲಿ ಕೆಲಸ ಮಾಡುವವರು ಪ್ರತಿವಾದಿ ಕಂಪನಿಯವರು ವಿದ್ಯುತ್ ಕಂಬಗಳನ್ನು ಹಾಕುತ್ತಿರುವ ಬಗ್ಗೆ ನಿಮಗೆ ತಿಳಿಸಲಿಲ್ಲವಾ ಎಂದರೆ ಸಾಕ್ಷಿ ಸದರಿಯವರು ಇಲ್ಲದ ಸಮಯದಲ್ಲಿ ಹಾಕಿರುವ ಬಗ್ಗೆ ತಿಳಿಸಿರುತ್ತಾರೆ ಎಂದು ನುಡಿಯುತ್ತಾರೆ.

ಈ ರೀತಿ ಪ್ರತಿವಾದಿಯರು ವಿದ್ಯುತ ಕಂಬಗಳನ್ನು ಹಾಕಿಸಿದ ನಂತರ ನೀವು ಅವರ ವಿರುದ್ಧ ಕಾನೂನು ಕ್ರಮ ಕೈಗೊಂಡರಾ ಎಂದರೆ ಸಾಕ್ಷಿ ನಾನು ಪ್ರತಿವಾದಿ ಕಂಪನಿಗೆ ಹೋಗಿ ಅವರನ್ನು ಭೇಟಿಯಾಗಿ ಮೌಖಿಕ ಆಕ್ಷೇಪಣೆಯನ್ನು ಸಲ್ಲಿಸಿರುತ್ತೇನೆ. ಈ ರೀತಿ ನೀವು ಮೌಖಿಕ ಆಕ್ಷೇಪಣೆಯನ್ನು 2019 ರಲ್ಲಿ ನೀಡಿದ್ದರಾ ಎಂದರೆ ನನ್ನ ಗಮನಕ್ಕೆ ಬಂದಾಗ ಎಂದು ನುಡಿಯುತ್ತಾರೆ. ನನ್ನ ಗಮನಕ್ಕೆ ಅದು 2019 ಕ್ಕೆ ಬಂದಿರುತ್ತದೆ. ನಿಪಿಃ4 ಮತ್ತು 5 ರಲ್ಲಿ ಕಾಣುವ ಕಂಬಗಳು ನಿಮ್ಮ ಜಮೀನಿನ ಕೊನೆಯ ಭಾಗದಲ್ಲಿ ಇವೆ ಎಂದರೆ ಸರಿಯಲ್ಲ, ಸಾಕ್ಷಿ ನಮ್ಮ ಜಮೀನಿನ ಒಳಗಡೆ ಇದೆ ಎಂದು ನುಡಿಯುತ್ತಾರೆ. ನಿಪಿಃ7 ರಲ್ಲಿ ಕಾಣುತ್ತಿರುವ ವಿದ್ಯುತ ಕಂಬದ ಕೆಳಭಾಗದಲ್ಲಿ ಏನ್ನನ್ನು ಬೆಳೆಯುತ್ತಿಲ್ಲ ಎಂದರೆ ಸಾಕ್ಷಿ ನಾನು ಸಾಗುವಾನಿ ಮರಗಳನ್ನು ಹಾಕಿದ್ದೇನೆ ಅಂತ ನುಡಿಯುತ್ತಾರೆ. ಮುಂದುವರೆದು ಸ್ವಲ್ಪ ಗಿಡಗಳು ಬಿದ್ದು ಹೋಗಿದ್ದೇವು ಎಂದು ನುಡಿಯುತ್ತಾರೆ. ಸಾಮಾನ್ಯವಾಗಿ ಒಂದು ವಿದ್ಯುತ ಕಂಬದ ಕೆಳಗೆ ಯಾವುದೇ ಗಿಡ ಅಥವಾ ಬೆಳೆಗಳನ್ನು ಬೆಳೆಯಬಾರದು ಎಂದರೆ ಸಾಕ್ಷಿ ನಾನು ಅವುಗಳನ್ನು 2011 ರಲ್ಲಿ ಹಾಕಿರುತ್ತೇನೆ ಎಂದು ನುಡಿಯುತ್ತಾರೆ.

ಪ್ರತಿವಾದಿ ಕಂಪನಿ ಇವರು ನನ್ನ ವಿರುದ್ಧ ಇದೇ ನ್ಯಾಯಾಲಯದಲ್ಲಿ ಓ ಎಸ್ ನಂಃ48/2023 ದಾಖಲು ಆಗಿದೆ ಎಂದರೆ ಸಾಕ್ಷಿ ಹೌದು ಅದಕ್ಕೆ ನಾನು ತಕರಾರು ಸಲ್ಲಿಸಿದ್ದೇನೆ ಅಂತ ನುಡಿಯುತ್ತಾರೆ. ಪ್ರತಿವಾದಿ ಇವರು ಓ ಎಸ್ ನಂಃ48/2023 ದಾಖಲಿಸಿದ ನಂತರ ನಾನು ಅವರ ವಿರುದ್ಧ ಈ ದಾವೆಯನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾನು ದಾಖಲಿಸಿದ ನಂತರ ಅವರು ನನ್ನ ವಿರುದ್ಧ ದಾವೆ ದಾಖಲಿಸಿದ್ದಾರೆ ಎಂದು ನುಡಿಯುತ್ತಾರೆ.ಸಾಕ್ಷಿ ಮತ್ತೆ ಮುಂದುವರೆದು ನಾನು ಈ ದಾವೆಯನ್ನು ಹಾಕಿದ ನಂತರ

ಪ್ರತಿವಾದಿಯರು ನನ್ನ ವಿರುದ್ಧ ಓ ಎಸ್ ನಂಃ48/2023 ಸಾಮೂಹಿಕವಾಗಿ ದಾಖಲಿಸಿರುವ ಬಗ್ಗೆ ಗೊತ್ತಾಗಿದ್ದರಿಂದ ನಾನು ಆ ದಾವೆಯಲ್ಲಿ ನನ್ನ ತಕರಾರು ಸಲ್ಲಿಸಿರುತ್ತೇನೆ.

ದಾವಾ ಜಮೀನಿನಲ್ಲಿರುವ ವಿದ್ಯುತ ಕಂಬಗಳಲ್ಲಿ ವಿದ್ಯುತ ಸರಬರಾಜು ಆಗುತ್ತಿದಿಯಾ ಎಂದರೆ ಸಾಕ್ಷಿ ಆಗುತ್ತದೆ ಆದರೆ ಎಷ್ಟು ಕೆವಿ ಅಂತ ಗೊತ್ತಿಲ್ಲ ಅಂತ ನುಡಿಯುತ್ತಾರೆ. ನನ್ನ ಜಮೀನಿನಲ್ಲಿರುವ ವಿದ್ಯುತ ಕಂಬಗಳ ಮೂಲಕ ವಿದ್ಯುತ ಸರಬರಾಜು ಆಗಿ ಅದು ಪೂರ್ತಿ ಕುಂದಗೋಳ ತಾಲ್ಲೂಕಿಗೆ ಸರಬರಾಜು ಆಗುತ್ತದೆ ಎಂದರೆ ಸಾಕ್ಷಿ ಆಗುತ್ತಿರಬಹುದು ಆದರೆ ನನಗೆ ನಿಖರವಾಗಿ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ಈ ದಾವೆಯಲ್ಲಿ ನಾನು ಹೆಸ್ಕಾಂ ಇವರನ್ನು ಪಾರ್ಟಿ ಮಾಡಿರುವುದಿಲ್ಲ ಎಂದರೆ ಸರಿ. 2012 ನೇ ಇಸ್ವಿಯಲ್ಲಿ ಪ್ರತಿವಾದಿ ಕಂಪನಿ ಇವರು ನನಗೆ ಪರಿಹಾರದ ಹಣವನ್ನು ನೀಡಿದ ನಂತರ ನಾನು ಒಪ್ಪಿಗೆ ನೀಡಿದ ಮೇಲೆ ಈ ರೀತಿ ನನ್ನ ಜಮೀನಿನಲ್ಲಿ ವಿದ್ಯುತ ಕಂಬಗಳನ್ನು ಸ್ಥಾಪಿಸಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿ ಕಂಪನಿ ಇವರು ಈ ರೀತಿ ನಿಮಗೆ ಪರಿಹಾರ ನೀಡದ ಬಗ್ಗೆ ನೀವು ನ್ಯಾಯಾಲಯಕ್ಕೆ ಯಾವುದಾದರು ದಾವೆಯನ್ನು ಸಲ್ಲಿಸಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ನಾನು 2012 ರಿಂದ 2023 ರ ವರೆಗೆ ಈ ರೀತಿ ವಿದ್ಯುತ ಕಂಬಗಳು ಸ್ಥಾಪನೆ ಆಗಿದ್ದರು ಸಹ ಪ್ರತಿವಾದಿಗಳ ವಿರುದ್ಧ ಯಾವುದೇ ಕಾನೂನು ಕ್ರಮ ಜರುಗಿಸಿರುವುದಿಲ್ಲ ಎಂದರೆ ಸಾಕ್ಷಿ ನನಗೆ ಈಗ ಗೊತಾಗಿದ್ದರಿಂದ ದಾವೆ ದಾಖಲಿಸಿದ್ದೇನೆ ಎಂದು ನುಡಿಯುತ್ತಾರೆ. ನೀವು ನಿಮ್ಮ ವಾದ ಪತ್ರದಲ್ಲಿ ಸದರಿ ಜಮೀನನ್ನು ನಾನು 2011 ರಿಂದ ವ್ಯವಸಾಯ ಮಾಡಿಸುತ್ತಿರುವ ಬಗ್ಗೆ ಹೇಳಿದ್ದು, ಆದರೆ ಸದರಿ ಜಮೀನಿನಲ್ಲಿ ವಿದ್ಯುತ ಕಂಬಗಳು ಸ್ಥಾಪನೆಯಾಗಿರುವ ಬಗ್ಗೆ ನಿಮ್ಮ ಗಮನಕ್ಕೆ ಇರಲಿಲ್ಲವಾ ಎಂದರೆ ಸಾಕ್ಷಿ ನಾನು 2011 ರಲ್ಲಿ ಮಾವಿನ ಗಿಡಗಳನ್ನು ಹಚ್ಚುವಾಗ ಯಾವುದೇ ಕಂಬಗಳು ಇರಲಿಲ್ಲ ಎಂದು ನುಡಿಯುತ್ತಾರೆ. ನನಗೆ 2023 ರಲ್ಲೆ ಈ ರೀತಿ ವಿದ್ಯುತ ಕಂಬಗಳು ಇರುವುದು ತಿಳಿಯಿತು ಎಂದರೆ ಸಾಕ್ಷಿ ಡಿಸೆಂಬರ್ 2022 ರಲ್ಲಿ ತಿಳಿಯಿತು ಎಂದು ನುಡಿಯುತ್ತಾರೆ.

ಈ ರೀತಿ ಖಾಸಗೀ ಜಮೀನಿನ ಮೇಲೆ ಒಂದು ಬಾರೀ ವಿದ್ಯುತ ಕಂಬಗಳನ್ನು ಸ್ಥಾಪಿಸಿ ಆ ಕಂಬಗಳ ಮೂಲಕ ವಿದ್ಯುತ ಸರಬರಾಜು ಆಗಲು ಶುರು ಆದಾಗಿನಿಂದ ಸದರಿ ವಿದ್ಯುತ ಕಂಬಗಳು ಸರಕಾರಿ ಸ್ವತ್ತುಗಳು ಆಗಿ ಪರಿಗಣಿಸುತ್ತವೆ ಹಾಗಾಗೀ ನೀವು ಸರಕಾರದ ವಿರುದ್ಧ Mandatory Injunction ಆದೇಶ ಪಡೆಯಲು ಬರುವುದಿಲ್ಲ ಎಂದರೆ ಸಾಕ್ಷಿ ಪ್ರತಿವಾದಿ ಕಂಪನಿ ಸರಕಾರಿ ಕಂಪನಿ ಅಲ್ಲ ಅದು ಖಾಸಗೀ ಕಂಪನಿ ಎಂದು ನುಡಿಯುತ್ತಾರೆ. ನನಗೆ ಕೇವಲ ಪ್ರತಿವಾದಿ ಕಂಪನಿ

ಇವರಿಗೆ ಪರಿಹಾರ ಕೋರುವ ಪರಿಹಾರ ಮಾತ್ರ ಲಭ್ಯವಿರುತ್ತದೆ ಎಂದರೆ ಸಾಕ್ಷಿ ಇಲ್ಲನನಗೆ ಪ್ರತಿವಾದಿಯರು ಸದರಿ ವಿದ್ಯುತ ಕಂಬಗಳನ್ನು ತೆಗೆಯಬೇಕು ಎಂದು ನುಡಿಯುತ್ತಾರೆ. ಪ್ರತಿವಾದಿ ಕಂಪನಿಯು ಈಗಾಗಲೇ 2012 ರಲ್ಲಿ ನನಗೆ ಪರಿಹಾರ ಹಣವನ್ನು ನೀಡಿ ನನ್ನಿಂದ ಅನುಮತಿ ಪಡೆದ ನಂತರವೇ ಸದರಿ ವಿದ್ಯುತ ಕಂಬಗಳನ್ನು ದಾವಾ ಆಸ್ತಿಯಲ್ಲಿ ಸ್ಥಾಪಿಸಿದ್ದರಿಂದ ನಾನು ಈ ದಾವೆ ಪರಿಹಾರವನ್ನು ಪಡೆಯಲು ಅರ್ಹನಾಗಿರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಪರಿಹಾರ ನೀಡಿಲ್ಲ, ನಾನು ಒಪ್ಪಿಗೆ ಸಹ ನೀಡಿಲ್ಲ ಎಂದು ನುಡಿಯುತ್ತಾರೆ. ನಾನು ಈಗ 11 ವರ್ಷಗಳ ನಂತರ ಪ್ರತಿವಾದಿ ವಿರುದ್ಧ ಸುಳ್ಳು ದಾವೆ ಸಲ್ಲಿಸಿ, ಸುಳ್ಳು ಸಾಕ್ಷಿ ನುಡಿಯುತಿದ್ದೇನೆ ಎಂದರೆ ಸರಿಯಲ್ಲ.

(ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಸಾಕ್ಷಿಯ ಸಂಪೂರ್ಣ ಪಾಟೀ ಸವಾಲು ಮಾಡಿರುತ್ತಾರೆ.)

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೆ ಸರಿ ಇದೆ.**

**Sd/**

**(ಶ್ರೀಮತಿ ಗಾಯತ್ರಿ)**

**ದಿವಾಣಿ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ. ದಂ.ಗಳು**

**ಕುಂದಗೋಳ.**